ಅನುಬಂಧ – I

ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 8)

2010–2011ನೇ ಹಣಕಾಸು ಭಾಗದ ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2010–2011ನೇ ಹಣಕಾಸು ಭಾಗದ ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮವಾಗಲಿ.

1. ಸಂಕ್ಷಿಪ್ತ ಹೆಸರು :– ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಲೇಖಾನುದಾನ) ಅಧಿನಿಯಮ, 2010 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2010–2011ನೇ ಹಣಕಾಸು ಭಾಗದ ವರ್ಷಕ್ಕಾಗಿ 2399571.80 ಲಕ್ಷ ರೂಪಾಯಿಗಳ ನೀಡಿಕೆ :– ಅನುಸೂಚಿತ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 2010–2011ನೇ ಹಣಕಾಸು ಭಾಗದ ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಇಪ್ಪತ್ಮೂರು ಸಾವಿರದ ಒಂಭೈನೂರ ತೊಂಭತ್ತೈದು ಕೋಟಿ ಎಪ್ಪತ್ತೊಂದು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು.

3. **ಧನವಿನಿಯೋಗ** :– ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ
(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ. ಲಕ್ಷಗಳಲ್ಲಿ)

			ಮೀರದ ಮೊಬಲಗು		
ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ವಿಧಾನಸಭೆಯಿಂದ ಮತಸ್ಥತವಾದುದನ್ನು	ಸಂಚಿತನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2		3	4	5
01	ಕೃಷಿ ಮತ್ತು ತೋಟಗಾರಿಕೆ	ರಾಜ್ಯ	68784.51	8.21	68792.72
		ಬಂಡವಾಳ	2604.56	-	2604.56
02	ಪಶು ಸಂಗೋಪನೆ ಮತ್ತು ಮೀನುಗಾರಿಕೆ	ರಾಜ್ಯ	26613.16	-	26613.16
		ಬಂಡವಾಳ	2950.38	-	2950.38
03	ಅರ್ಥಿಕ	ರಾಜ್ಯ	204064.72	5.00	204069.72
		ಬಂಡವಾಳ	1167.83	-	1167.83
04	ಸಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜ್ಯ	10385.37	3158.63	13544.00
		ಬಂಡವಾಳ	-	-	-
05	ಒಳಾಡಳಿತ ಮತ್ತು ಸಾರಿಗೆ	ರಾಜ್ಯ	80441.79	-	80441.79
		ಬಂಡವಾಳ	13530.29	-	13530.29
06	ಮೂಲಧೂತ ಸೌಕರ್ಯ	ರಾಜ್ಯ	330.77	-	330.77
		ಬಂಡವಾಳ	22654.99	-	22654.99
07	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್	ರಾಜ್ಯ	69705.20	-	69705.20
		ಬಂಡವಾಳ	48842.44	-	48842.44
08	ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ	ರಾಜ್ಯ	18429.38	3001.68	21431.06
		ಬಂಡವಾಳ	133.00	-	133.00
09	ಸಹಕಾರ	ರಾಜ್ಯ	13849.16	-	13849.16
		ಬಂಡವಾಳ	446.17	-	446.17

1	2		3	4	5
10	ಸಮಾಜ ಕಲ್ಯಾಣ	ರಾಜ್ಯ	79644.66	-	79644.66
		ಬಂಡವಾಳ	9296.81	-	9296.81
11.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜ್ಯ	57109.52	-	57109.52
		ಬಂಡವಾಳ	49901.01	-	49901.01
12	ಯುವಜನ ಸೇವೆಗಳು ಮತ್ತು ಕ್ರೀಡಾಭಿವೃದ್ಧಿ	ರಾಜ್ಯ	7606.56	-	7606.56
		ಬಂಡವಾಳ	4595.40	-	4595.40
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜ್ಯ	30541.65	0.90	30542.55
		ಬಂಡವಾಳ	599.40	-	599.40
14	ಕಂದಾಯ	ರಾಜ್ಯ	90506.15	-	90506.15
		ಬಂಡವಾಳ	6901.36	-	6901.36
15	ಮಾಹಿತಿ ತಂತ್ರಜ್ಞಾನ	ರಾಜ್ಯ	2589.11	-	2589.11
		ಬಂಡವಾಳ	507.83	-	507.83
16	ಮನೆ	ರಾಜ್ಯ	29237.43	-	29237.43
		ಬಂಡವಾಳ	4153.30	-	4153.30
17	ಶಿಕ್ಷಣ	ರಾಜ್ಯ	343985.41	-	343985.41
		ಬಂಡವಾಳ	9305.35	-	9305.35
18	ಕಾರ್ಮಿಕ ಮತ್ತು ಕೈಗಾರಿಕೆ	ರಾಜ್ಯ	33840.92	0.09	33841.01
		ಬಂಡವಾಳ	3507.24	-	3507.24
19	ನಗರಾಭಿವೃದ್ಧಿ	ರಾಜ್ಯ	151561.25	-	151561.25
		ಬಂಡವಾಳ	50299.65	-	50299.65
20	ಯೋಜನೆಯೇತರ	ರಾಜ್ಯ	43673.30	-	43673.30
		ಬಂಡವಾಳ	68282.45	-	68282.45
21	ಜಲಸಂಪನ್ಮೂಲ	ರಾಜ್ಯ	13321.09	-	13321.09
		ಬಂಡವಾಳ	168507.87	-	168507.87

1	2.		3	4	5
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜ್ಯ	75738.12	-	75738.12
		ಬಂಡವಾಳ	13464.19	-	13464.19
23	ಕಾರ್ಮಿಕ	ರಾಜ್ಯ	15354.46	-	15354.46
		ಬಂಡವಾಳ	499.50	-	499.50
24	ಇಂಧನ	ರಾಜ್ಯ	95396.43	70.93	95467.36
		ಬಂಡವಾಳ	22633.01	-	22633.01
25	ಕಲೆ ಮತ್ತು ಸಂಸ್ಕೃತಿ	ರಾಜ್ಯ	6737.79	-	6737.79
		ಬಂಡವಾಳ	699.63	-	699.63
26	ಯೋಜನೆ, ಸಾಂಖ್ಯಿಕ ಪ್ರಾಗೂ ದತ್ತಾಂಶ ಮತ್ತು ತಂತ್ರಜ್ಞಾನ	ರಾಜ್ಯ	2062.12	-	2062.12
		ಬಂಡವಾಳ	8215.11	-	8215.11
27	ಕಾನೂನು	ರಾಜ್ಯ	12483.32	-	12483.32
		ಬಂಡವಾಳ	299.70	-	299.70
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜ್ಯ	2902.27	51.24	2953.51
		ಬಂಡವಾಳ	-	-	
29	ಋಣ ಮೇಲುಸ್ತುವಾರಿ	ರಾಜ್ಯ	-	210322.80	210322.80
		ಬಂಡವಾಳ	-	126969.24	126969.24
		ಒಟ್ಟು	2055983.09	343588.71	2399571.80

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2010–2011ನೇ ಹಣಕಾಸು ಭಾಗದ ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ